ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಆಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಲಕ್ಷ್ಮಣನು ಹೊಂದುವದಕ್ಕೆ ಹಕ್ಕುದಾರ ನಾಗುವದರಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದೆಲ್ಲವೆ ಇದಕ್ಕೆ ಲಗತ್ತಾಗಿರುವ ಪಟ್ಟ್ಯಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟ್ಯು ನಿರ್ಬಂಧ ಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಟ್ 1890ನೇ ಇಸವಿ ಅಕ್ಟೋಬರ್ 8ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಂದ ಕೊಡಲ್ಪಟ್ಟಿತು.

ಸಾಲದ ಪಟ್ಟ್ಯ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಮೈಸೂರು ಲೈಫ್ ಇನ್‌ಷ್ಯೂರೆನ್ಸ್ ಬ್ಯಾಂಕ್ ಯೇಜಂಟ್	10 0 0	..	ಡಿಕ್ರೀ ಬಾಬತು.	
2	ಮೈಸೂರು ಬಂಡೀಕೇರೀಲಿರುವ ಲಿಂಗಣ ..	150 0 0	..	ಡಿಟೋ	
3	ಮೈಸೂರು ಕಿಲ್ಲೇಲಿರುವ ಕೃಷ್ಣರಾವ್ ..	80 0 0	..	ಡಿಟೋ	
5	ಮೈಸೂರು ಎತಿರಾಜ ಸಂಪತ್ತುವೂರ ಬ್ಯಾಂಕ್ ಯೇಜಂಟ್	75 0 0	..	ಡಿಟೋ	
		315 0 0			

ಎಂ. ರಾಮಸ್ವಾಮಯ್ಯರ್,
ಸಬ್ ಜಡ್ಜ್.

ನೋಟಿಫಿಕೇಷ್ನ್.

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮೂರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು. ಈ ಆನೆಯನ್ನ ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನ ಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ. ಅಡಿ.	ಅಂಗಲ	ಹಿಡಿಯಲ್ಪಟ್ಟ್ಯ ತಾರೀಖು.
ಕಲ್ಯಾಣಿ	ಹೆಂಣು	7	4	28—6—86.

ಷರಾ.—ಈ ಆನೆಯು ಚನ್ನಾಗಿ ತಯಾರ್ಮಾಡಲ್ಪಟ್ಟ್ಯಿದೆ ಮತ್ತು ಮೈಳ್ಳೇ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿಲಾಗಾಯತು ಹೊಸ ಆನೆಗಳನ್ನು ತಯಾರ್ಮಾಡಲು ಉಪಯೋಗಿಸಲ್ಪಡುತ್ತಾ ಇದೆ.

ಬಿ. ರಾಮಸ್ವಾಮಿ ಐಯ್ಯರ್,
ಅಸಿಸ್ಟೆಂಟ್ ಕ್ಯಾಸರ್‌ವೇಟರ್ ಆಫ್ ಮೈಸೂರ್.

ಸಾಗರ ಸಬ್ ಡಿವೀಜ್ಯ ಮುನಶಿಫ್ ಕೋರ್ಟ್ಯ.

1890ನೇ ಇಸವಿ ಅಸಲ್ ನಂಬರ್ 390.

ವಾದಿ.	ಪ್ರತಿವಾದಿ.
1. ಪಟೇಲ್ ಈರಯ್ಯ ಬಿನ್ ಶಿಪ್ಪಯ್ಯ 2. ಪಾಲ್‌ದಾರ ಈರಯ್ಯ ಬಿನ್ ವೀರಬಸಯ್ಯ 3. ಹೊಸೂರು ದ್ಯಾವಾ ಬಿನ್ ಮಂಜಾ 4. ಸಾರೆಕೊಪ್ಪದ ಭಿಷ್ಟಾ ಬಿನ್ ರಾಮ 5. ಕೂಳಗದ ಕಲ್ಲ ಸೊರಬ ತಾಲ್ಲೂಕು ತವನಂದಿ ಮಾಗಣಿ ಗೆಂಡ್ಲದ ವಾಸಿಗಳು	ಪಟೇಲ್ ಬಸಪ್ಪಗವುಡ ಸೊರಬ ತಾಲ್ಲೂಕು ತವನಂದೀ ಮಾಗಣಿ ಬೊಮ್ಮನಹಳ್ಳಿ ವಾಸಿ

ಸೊರಬ ತಾಲ್ಲೂಕು ಗೆಂಡ್ಲಗ್ರಾಮದ ವಾಸಸ್ಥರ ಬಾಬತು ಗೆಂಡ್ಲ ಗ್ರಾಮದ ಜಾನುವಾರುಗಳು ವೂರಿನಿಂದ ವೇವಿಗೆ ಹೋಗಿ ಬರುವದಕ್ಕೂ, ಜಮಿನು ಸಾಗುವಳಿಗೆ ಹೋಗಿ ಬರುವದಕ್ಕೂ ಮತ್ತು ಗ್ರಾಮದಲ್ಲಿರತಕ್ಕ ಜನಗಳು ಜಮಿನು ವ್ಯವಸಾಯಕ್ಕೆ ಹೋಗಿ ಬರುವದಕ್ಕೂ ಆನವಟ್ಟಿ ವಗೈರೆ ಪ್ರಾಂತ್ಯಕ್ಕೆ ಗಾಡೀನಿಶಿ ಜನಗಳು ಹೋಗಿ ಬರುವದಕ್ಕೂ ಬಹುಕಾಲದಿಂದ ಯಿದ್ದ ಮಾರ್ಗವನ್ನ ಪ್ರತಿವಾದಿಯು ಅಡ್ಡವಾಗಿ ಸುಮಾರು $1\frac{1}{2}$ ಗಜ ಯತ್ತರ ಸುಮಾರು 4 ಗಜ ಅಗಲ ಸುಮಾರು 6 ಗಜ ಉದ್ದ ಕಲ್ಲಿನಿಂದಲು ಗಾರೇ ಯಿಂದಲೂ 1890ನೇ ಇಸವಿ ಮೇ ತಿಂಗಳು ಸುಮಾರಿನಲ್ಲಿ ಅಡ್ಡಗಟ್ಟು ಕಟ್ಟಿದ್ದಾನೆಂತಲೂ ಆ ರೀತಿ ಕಟ್ಟಿದ್ದರಿಂದ ಅಡ್ಡಗಟ್ಟಿನ ಪಶ್ಚಿಮ ದಿಕ್ಕಿಗೆ ದಾರಿಯಲ್ಲಿ $1\frac{1}{2}$ ಗಜ ಯತ್ತರ ಸುಮಾರು 70 ಗಜ ವುದ್ದ ಮಳೆಗಾಲದಲ್ಲಿ ನೀರು ನಿಲ್ಲುತ್ತೆಂತಲೂ ಅಡ್ಡಗಟ್ಟಿನಿಂದ ಹಳ್ಳಿದ ವರಿಗೆ ಪೂರ್ವ ದಿಕ್ಕಿಗೆ ಸುಮಾರು 6 ಗಜ ದೂರದ ವರಿಗೂ 1 ಗಜ ಆಳವಾಗಿ ಕೆಸರು ಆಗುತ್ತೆಂತಲೂ ಯಿದರಯಿಂದ ಮಳೆಗಾಲದಲ್ಲಿ ಜಾನುವೆರುಗಳು ಜನಗಳು ಗಾಡೀನಿಶಿ ವೋಡ್ಯಾಡುವದಕ್ಕೂ ಮತ್ತು ಬೇಡಿಗೆಯಲ್ಲಿ ಗಾಡಿಗಳು ದನಗಳು ವೋಡ್ಯಾಡುವದಕ್ಕೂ ಅಡ್ಡಿ ಆಗಿರುತ್ತೆಂತಲೂ ಸಹ ವಾದಿಗಳು ಪ್ರತಿವಾದೀಮೇಲೆ ಈ ಕೋರ್ಟಿನಲ್ಲಿ ತಾವಾತಂದು ಯಿರುವದರಿಂದಲೂ ಸದರೀ ಗೆಂಡ್ಲ ಗ್ರಾಮಸ್ತರ ಯಲ್ಲರ ಬಗ್ಯೂ ಈ ವ್ಯಾಜ್ಯ ತಂದಿರುವದಾಗಿಯೂ ಸದರೀ ಗ್ರಾಮದಲ್ಲಿ 30 ಮನೆಗಳು ಯಿರುವದಾಗಿಯೂ ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಪ್ರಕಾರ ಪಬ್ಲಿಕ್ ಅಡ್ವರ್ ಟೈಜ್‌ಮೆಂಟ್ ಮೂಲಕ ನೋಟೀಸ್ ಕೊಡಿಸಬೇಕಾಗಿಯೂ ವಾದಿಗಳು ಕೇಳಿಕೊಂಡಿರುವದರಿಂದಲೂ ಸಹ ಈ ಮೊಕದ್ದಮಾ ಯಿಷ್ಯೂ ಸೆಟ್ಲ ಬಗ್ಯೆ ಯಿದೇ ಇನವಿ ಡಿಸಂಬರ್ ತಾರೀಖು 11ಕ್ಕೆ ಹಿಯರಿಂಗ್ ನಿಶ್ಚಯಿಸಿರುವ ಸಂಗತಿ ಸದರೀ ಗೆಂಡ್ಲ ಗ್ರಾಮಸ್ತರಾದ ಯಲ್ಲಾ ಜನಗಳಿಗೂ ಯಿದರಿಂದ ತಿಳಿಯಪಡಿಸಿ ಯಿದೆ.

ತಾರೀಖು 6ನೇ ನವಂಬರ್ 1890ನೇ ಇಸವಿ ವೊಕ್ಕಾಂ ಸಾಗರ.

ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್,
ಮುನ್ಸೀಫ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಬಂದು ಪೌಂವುಳ್ಳ ಡಬ್ಬಿಗೆ 17 ರೂ. 8 ಆಣೆ; ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ಸ ವ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡುಆಣೆ ಹಾಸಲೂ ಕೊಡಬೇಕು.

Mysore Government Central Press, Bangalore.—1890.